APRIL 18, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಬೆಂಗಳೂರು ತಂತ್ರಜ್ಞಾನ ಶೃಂಗ; ಬ್ರಿಡ್ಜ್ ಟು ಬೆಂಗಳೂರು; ಹೊಸದಿಲ್ಲಿಯ ಪೂರ್ವಭಾವಿ ಸಭೆಯಲ್ಲಿ, ಮುಖ್ಯಮಂತ್ರಿ ಭಾಗಿ.**

**‘ಕರ್ನಾಟಕ ಲೋಕಾಯುಕ್ತ’ ಸಂಸ್ಥೆ, 40ನೇ ವಾರ್ಷಿಕೋತ್ಸವ; ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ, ಇಂದು ಉದ್ಘಾಟನೆ.**

**ನಾರಿ ಶಕ್ತಿ ವಂದನೆ ಅಧಿನಿಯಮಕ್ಕೆ, ಲೋಕಸಭೆಯಲ್ಲಿ ಸೋಲು.**

**ಇಂದು ವಿಶ್ವ ಪರಂಪರೆ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಬೆಂಗಳೂರು ತಂತ್ರಜ್ಞಾನ ಶೃಂಗದ ಪೂರ್ವಭಾವಿಯಾಗಿ, ಹೊಸ ದಿಲ್ಲಿಯಲ್ಲಿ ಜರುಗಿದ ವಿವಿಧ ರಾಷ್ಟ್ರಗಳ ರಾಯಬಾರಿಗಳು ಹಾಗೂ ಹೈ ಕಮಿಷನರ್ ಜೊತೆಗಿನ**

ಸಂವಾದ –ಬ್ರಿಡ್ಜ್ ಟು ಬೆಂಗಳೂರು ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡು ಮಾತನಾಡಿದರು. ನವೆಂಬರ್ ತಿಂಗಳಿನಲ್ಲಿ ಆಯೋಜಿತ, ತಂತ್ರಜ್ಞಾನ ಶೃಂಗದಲ್ಲಿ ಪಾಲ್ಗೊಂಡು, ಕರ್ನಾಟಕದ ಅಭಿವೃದ್ಧಿಯಲ್ಲಿ ಪಾಲುದಾರರಾಗುವಂತೆ, ಅವರು ಕರೆ ನೀಡಿದರು. ಕರ್ನಾಟಕ 16 ಸಾವಿರ ಸ್ಟಾರ್ಟ್ಅಪ್ ಗಳಿಗೆ ನೆಲೆಯಾಗಿದೆ ಎಂದರು.

<><><>

**ರಾಜ್ಯ ಸಚಿವ ಸಂಪುಟ, “**ಕರ್ನಾಟಕ ರೋಹಿತ್ ವೇಮುಲ ವಿಧೇಯಕ**”** ಬಹಿಷ್ಕಾರ ಅಥವಾ ಅನ್ಯಾಯ ತಡೆಗಟ್ಟುವಿಕೆ, ಶಿಕ್ಷಣ ಮತ್ತು ಘನತೆಯ ಹಕ್ಕಿಗೆ ಅನುಮೋದನೆ ನೀಡಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ದೇಶಾದ್ಯಂತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿಯ ಕಾರಣಕ್ಕಾಗಿ, ಎದುರಾಗುವ ಅನ್ಯಾಯ, ಅಸಮಾನತೆ, ಅವಮಾನಗಳಿಂದಾಗಿ, ಈಗಾಗಲೇ ಹಲವು ಜೀವಗಳು ಬಲಿಯಾಗಿದ್ದು, ರಾಜ್ಯದಲ್ಲಿ ಇಂತಹ ಸಾವುಗಳಿಗೆ ಕೊನೆ ಹಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಹೇಳಿದ್ದಾರೆ.

<><><>

**‘ಕರ್ನಾಟಕ ಲೋಕಾಯುಕ್ತ’** ಸಂಸ್ಥೆ, 40ನೇ ವಾರ್ಷಿಕೋತ್ಸವದ ಹೊಸ್ತಿಲಲ್ಲಿದೆ. ಬೆಂಗಳೂರಿನ ವಿಧಾನಸೌಧದ, ಸಮ್ಮೇಳನ ಸಭಾಂಗಣದಲ್ಲಿ, ಇಂದು ಮಧ್ಯಾಹ್ನ 2.30ಕ್ಕೆ ಆಯೋಜಿತ ಕಾರ್ಯಕ್ರಮದಲ್ಲಿ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ, ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯಮೂರ್ತಿ ಅರವಿಂದಕುಮಾರ, ಅತಿಥಿಯಾಗಿ ಆಗಮಿಸಲಿದ್ದಾರೆ. ಲೋಕಾಯುಕ್ತ ಬಿ.ಎಸ್.ಪಾಟೀಲ, ಉಪ ಲೋಕಾಯುಕ್ತರಾದ, ಕೆ.ಎನ್. ಫಣೀಂದ್ರ ಮತ್ತು ಬಿ. ವೀರಪ್ಪ, ಭಾಗವಹಿಸಲಿದ್ದಾರೆ.

<><><>

**ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದ,** 22ನೇ ದ್ವೈ ವಾರ್ಷಿಕ, ರಾಜ್ಯ ಮಟ್ಟದ ಸಮಾವೇಶ, ಇಂದು ಬೆಳಗ್ಗೆ 10 ಗಂಟೆಗೆ, ಬೆಂಗಳೂರಿನ ಯಲಹಂಕದ, ಗಾಂಧಿ ಗ್ರಾಮೀಣ ಕೃಷಿ ವಿಜ್ಞಾನ ಕೇಂದ್ರದ, ಡಾಕ್ಟರ್ ಬಾಬು ರಾಜೇಂದ್ರ ಪ್ರಸಾದ ಸಮ್ಮೇಳನ ಸಭಾಂಗಣದಲ್ಲಿ, ಆಯೋಜಿತವಾಗಿದೆ. ಸರ್ವೋಚ್ಚ ನ್ಯಾಯಾಲಯದ, ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ ಸಮಾವೇಶವನ್ನು ಉದ್ಘಾಟಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳಲಿದ್ದಾರೆ. 'ಕೃತಕ ಬುದ್ಧಿಮತ್ತೆಯ ಯುಗದಲ್ಲಿ ನ್ಯಾಯಾಂಗದ ಮರುಚಿಂತನೆ' ವಿಷಯದ, ವಿಚಾರಗೋಷ್ಠಿ, ಎರಡು ದಿನಗಳ ಕಾಲ ನಡೆಯಲಿದೆ.

<><><>

**ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ,** ಮಹಿಳೆಯರಿಗೆ ಶೇಕಡ 33 ರಷ್ಟು, ರಾಜಕೀಯ ಪ್ರಾತಿನಿಧ್ಯ ಹಾಗೂ ಮೀಸಲಾತಿ ಕಲ್ಪಿಸುವ, ನಾರಿ ಶಕ್ತಿ ವಂದನೆ ಅಧಿನಿಯಮಕ್ಕೆ, ಲೋಕಸಭೆಯಲ್ಲಿ ಅನುಮೋದನೆ ದೊರೆತಿಲ್ಲ. ಕೇಂದ್ರದ ಆಡಳಿತಾರೂಢ, ಎನ್.ಡಿ.ಎ ಮೈತ್ರಿಕೂಟದ, 298 ಲೋಕಸಭಾ ಸಂಸದರು ಮಸೂದೆಯ ಪರವಾಗಿ ಮತ ಚಲಾಯಿಸಿದರೆ, 230 ಸಂಸದರು ಮಸೂದೆಯ ವಿರುದ್ಧ ಮತ ಚಲಾಯಿಸಿದರು. ಸಂವಿಧಾನದ 131ನೇ ತಿದ್ದುಪಡಿ ವಿಧೇಯಕ, ಲೋಕಸಭೆಯಲ್ಲಿ ಅಂಗೀಕಾರಗೊಳ್ಳಲು 328 ಸಂಸದರ ಮತಗಳ ಅಗತ್ಯವಿತ್ತು. ಒಟ್ಟು 543 ಲೋಕಸಭಾ ಸಂಸದರಲ್ಲಿ, 528 ಸಂಸದರು, ಸದನದಲ್ಲಿ ಹಾಜರಿದ್ದು ಮತ ಚಲಾಯಿಸಿದರು. ಸ್ಥಳೀಯ ಸ್ವಯಂಆಡಳಿತ ಸಂಸ್ಥೆಗಳಲ್ಲಿ, ಶೇಕಡ 33ರಷ್ಟು ಮಹಿಳಾ ಪ್ರಾತಿನಿಧ್ಯ ಕಲ್ಪಿಸಿರುವ ಕುರಿತು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಹಿರಿಯ ನಿಯತಕಾಲಿಕೆ, ಜೀವನ ಶಿಕ್ಷಣ ಮಾಸ ಪತ್ರಿಕೆಯ, ವಿಶ್ರಾಂತ ಸಂಪಾದಕ, ಧಾರವಾಡದ ಗುರುಮೂರ್ತಿ ಯರಗಂಬಳಿಮಠ.

<><><>

**ಗುರುಮೂರ್ತಿ ಯರಗಂಬಳಿಮಠ ಧ್ವನಿ– 50 ಸೆಕೆಂದುಗಳು**

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

‘ಸಂಘರ್ಷ ಮತ್ತು ವಿಪತ್ತಿನ ಸಂದರ್ಭದಲ್ಲಿ, ಸಜೀವ ಪರಂಪರೆಗಾಗಿ, ತುರ್ತು ಪ್ರತಿಕ್ರಿಯೆ’ ಎಂಬ ಧ್ಯೇಯದೊಂದಿಗೆ, ಇಂದು, ವಿಶ್ವ ಪರಂಪರೆ ದಿನಾಚರಣೆ. ಪಾರಂಪರಿಕ ತಾಣಗಳನ್ನು, ಗುರುತಿಸಿ, ಸಂರಕ್ಷಿಸುವ ಉದ್ದೇಶದಿಂದ, ಏಪ್ರಿಲ್ 18 ರಂದು, ವಿಶ್ವ ಪರಂಪರೆ ದಿನ ಆಚರಿಸಲಾಗುತ್ತದೆ. ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಬಳ್ಳಾರಿಯ ಸಂಗನಕಲ್ಲು, ರಾಬರ್ಟ್ ಬ್ರೂಸ್‌ಫುಟ್ ವಸ್ತು ಸಂಗ್ರಹಾಲಯದ ಗೌರವ ನಿರ್ದೇಶಕ, ಅಂತಾರಾಷ್ಟ್ರೀಯ ಖ್ಯಾತಿಯ ಪುರಾತತ್ವ ಶಾಸ್ತ್ರಜ್ಞ, ಧಾರವಾಡದ ಡಾಕ್ಟರ್ ರವಿ ಕೋರಿಶೆಟ್ಟರ.

<><><>

ರವಿ ಕೋರಿಶೆಟ್ಟರ ಧ್ವನಿ – 50 ಸೆಕೆಂದುಗಳು

<><><>

ರಾಜ್ಯ ಸರ್ಕಾರ, ಜಿಯೋಗ್ರಾಫಿಕ್ ಇನ್‌ಫಾಮೇಶನ್ ಸಿಸ್ಟಂ ಕೆ.ಜಿ.ಐ.ಎಸ್ 2.ಓ ಯೋಜನೆ ಜಾರಿಗೊಳಿಸಿದೆ ಎಂದು, ರಾಜ್ಯ ದೂರ ಸಂವೇದಿ, ಆನ್ವಯಿಕ ಕೇಂದ್ರದ ನಿರ್ದೇಶಕ, ಎನ್.ಎಲ್ ರಾಜೇಶ ತಿಳಿಸಿದ್ದಾರೆ. ಕಲಬುರಗಿ ಜಿಲ್ಲಾ ಪಂಚಾಯಿತಿಯ, ನೂತನ ಸಭಾಂಗಣದಲ್ಲಿ, ಜಿಲ್ಲಾ ಮಟ್ಟದ ಕಾರ್ಯಾಗಾರದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. 10 ವರ್ಷಗಳ ದೂರದೃಷ್ಟಿಯೊಂದಿಗೆ ರೂಪಿಸಲಾದ ಈ ಯೋಜನೆ, ಕೃತಕ ಬುದ್ಧಿಮತ್ತೆ, ಮಷೀನ್ ಲರ್ನಿಂಗ್, ಅತ್ಯಾಧುನಿಕ ಉಪಗ್ರಹ ಚಿತ್ರಣ ತಂತ್ರಜ್ಞಾನವನ್ನು ಒಳಗೊಂಡಿದ್ದು, ಅಕ್ರಮ ಗಣಿಗಾರಿಕೆ ತಡೆ, ಅರಣ್ಯ ಒತ್ತುವರಿ

ನಿಯಂತ್ರಣ ಹಾಗೂ ಬೆಳೆ ಹಾನಿ ವಿಮೆಯಲ್ಲಿನ ಅವ್ಯವಹಾರಗಳನ್ನು ತಡೆಯಬಹುದಾಗಿದೆ ಎಂದರು.

<><><>

ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ, ಸಂತೋಷ ಗಜಾನನ ಭಟ್, ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ ವಿನಯ ಕುಲಕರ್ಣಿ ಸೇರಿದಂತೆ, 16 ಜನ ಅಪರಾಧಿಗಳಿಗೆ, ಜೀವಾವಧಿ ಶಿಕ್ಷೆ ಹಾಗೂ 16 ಲಕ್ಷ ರೂಪಾಯಿ ದಂಡ ವಿಧಿಸಿ, ಆದೇಶಿಸಿದ್ದಾರೆ. ಧಾರವಾಡ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹಾಗೂ ಬಿ.ಜೆ.ಪಿ. ಮುಖಂಡ, ಯೋಗೇಶಗೌಡ ಕೊಲೆ ಪ್ರಕರಣದಲ್ಲಿ, ಪೊಲೀಸ್ ಅಧಿಕಾರಿ ಚನ್ನಕೇಶವ ಟಿಂಗ್ರೀಕರಗೆ 7 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ, ಆದೇಶಿಸಿದ್ದಾರೆ.

<><><>

ಹಿರಿಯ ಸಾಮಾಜಿಕ ಕಾರ್ಯಕರ್ತ, ಕೊಪ್ಪಳ ತಾಲೂಕು ಅಳವಂಡಿ ಗ್ರಾಮದ ಹೆಸರಾಂತ ಕನ್ನಡ ಅಧ್ಯಾಪಕ ನಾಗಪ್ಪ ಸವಡಿ, ಗದಗ ಜಿಲ್ಲೆ, ರೋಣ ತಾಲೂಕು ಕುರಡಗಿಯಲ್ಲಿ ನಿನ್ನೆ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು. ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಮಧ್ಯಾಹ್ನ 2 ಗಂಟೆಗೆ, ಅಳವಂಡಿ ಗ್ರಾಮದ ತೋಟದಲ್ಲಿ ಜರುಗಲಿದೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

ಕಲಬುರಗಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ, ಇಂದು ತಾಂತ್ರಿಕ ಕೌಶಲ ಸ್ಪರ್ಧೆ ಹಾಗೂ ಪ್ರದರ್ಶನ ಆಯೋಜಿತವಾಗಿದೆ. ಗೆಸ್ಕಾಂ ಅಧ್ಯಕ್ಷ, ಪ್ರವೀಣ ಹರವಾಳ, ಈ ಬೆಳಗ್ಗೆ 9.30ಕ್ಕೆ ಕಾರ್ಯಕ್ರಮಕ್ಕೆ, ಚಾಲನೆ ನೀಡಲಿದ್ದಾರೆ.

ಕೋಲಾರ ಜಿಲ್ಲೆ, ಉದ್ಯೋಗ ವಿನಿಮಯ ಕಚೇರಿಯಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಉದ್ಯೋಗ ಮೇಳ ಜರುಗಲಿದೆ.

ಯಾದಗಿರಿ ಹತ್ತಿ ಕ್ಲಸ್ಟರ್ ಯೋಜನೆ ಅಡಿ, 72 ಕೋಟಿ ರೂಪಾಯಿ ಮೊತ್ತದ ಕಾಮಗಾರಿಯ ವರದಿಗೆ, ರಾಜ್ಯ ಸಚಿವ ಸಂಪುಟ ಅನುಮೋದಿಸಿದೆ.

ದೂರದರ್ಶನ ಚಂದನ ವಾಹಿನಿ, "ರೈತ ರತ್ನ" ಕಾರ್ಯಕ್ರಮ ರೂಪಿಸಿದ್ದು, ಇಂದಿನಿಂದ ಪ್ರತಿ ಶನಿವಾರ ಸಂಜೆ 6 ರಿಂದ 7 ಗಂಟೆ ವರೆಗೆ ಪ್ರಸಾರವಾಗಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

ಬೆಂಗಳೂರು ತಂತ್ರಜ್ಞಾನ ಶೃಂಗ; ಬ್ರಿಡ್ಜ್ ಟು ಬೆಂಗಳೂರು; ಹೊಸದಿಲ್ಲಿಯ ಪೂರ್ವಭಾವಿ ಸಭೆಯಲ್ಲಿ, ಮುಖ್ಯಮಂತ್ರಿ ಭಾಗಿ.

'ಕರ್ನಾಟಕ ಲೋಕಾಯುಕ್ತ' ಸಂಸ್ಥೆ, 40ನೇ ವಾರ್ಷಿಕೋತ್ಸವ; ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ, ಇಂದು ಉದ್ಘಾಟನೆ.

ನಾರಿ ಶಕ್ತಿ ವಂದನೆ ಅಧಿನಿಯಮಕ್ಕೆ, ಲೋಕಸಭೆಯಲ್ಲಿ ಸೋಲು.

ಇಂದು ವಿಶ್ವ ಪರಂಪರೆ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>